ಶ್ರೀಮತಿ ಇ. ಇ. ವಾಜ್.—3ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು 331/3 ಭಾಗದಷ್ಟಿನ ಎಕ್ಸ್‌ಪೆಂಡಿಚರ್ ಸಹಾಯ ಕೊಡುತ್ತಿದ್ದರು. ಆದರೆ 4ನೇ ಪ್ಲಾನ್‌ನಲ್ಲಿ ಯಾವ ಸಹಾಯವನ್ನು ಕೊಟ್ಟಿಲ್ಲ. ರಾಜ್ಯಸರ್ಕಾರದವರೇ ಕೊಡುತ್ತಿದ್ದಾರೆ, ಇದರಲ್ಲಿ ಈಗ ಆಯಾ ಕಮ್ ಅಟೆಂಡರ್‌ಗೆ 2 ಲಕ್ಷ ರೂಪಾಯಿ ಪ್ರತ್ಯೇಕ ಎಕ್ಸ್‌ಪೆಂಡೀಚರ್‌ಗೆ 45 ಲಕ್ಷ ರೂ.ಗಳನ್ನು 1973-74 ನೇ ಬಡ್ಜೆಟ್‌ನಲ್ಲಿ ಏರ್ಪಾಡು ಮಾಡಿದೆ.

ಶ್ರೀ ವಿ. ಕೃಷ್ಣರಾವ್.—ಮಿಡ್ ಡೇ ಮೀಲ್ಸ್ ವಿಚಾರದಲ್ಲಿ ಉಪಾಧ್ಯಾಯರು ಮಿಡ್ ಡೇ ಮೀಲ್ಸ್ ಅವರೇ ಮಾಡುತ್ತಿರುವುದರಿಂದ ಶಾಲೆಯ ಪಾಠಪ್ರವಚನಗಳಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗೆ ಸರ್ಕಾರಕ್ಕೆ ಬಂದಿದ್ದ ಪಕ್ಷದಲ್ಲಿ ಅದಿಗೆ ಮಾಡುವುದಕ್ಕೆ ವ್ಯವಸ್ಥೆ ಏನಾದರೂ ಮಾಡುತ್ತೀರಾ? ಉಪಾಧ್ಯಾಯರು ಅಲ್ಲದೆ ಬೇರೆಯವರನ್ನು ನೇಮಕ ಮಾಡುವ ಯೋಚನೆ ಸರ್ಕಾರದಲ್ಲಿದೆಯೇ?

ಶ್ರೀಮತಿ ಇ. ಇ. ವಾಜ್.—ದುರುಪಯೋಗ ವಾಗುತ್ತಿದೆಯೇ ಇಲ್ಲವೇ ಎಂಬುದನ್ನು ನೋಡುವುದಕ್ಕೆ ಡಿಪಾರ್ಟ್‌ಮೆಂಟ್ ಕಮಿಟಿ ಇದೆ ಅದೇರೀತಿ ತಾಲ್ಲೂಕ್ ಕಮಿಟಿಗಳನ್ನು ಮಾಡುವ ಏರ್ಪಾಡು ಸರ್ಕಾರದವರು ಮಾಡಿದ್ದಾರೆ. ಆಯಾ ಕಂ ಕುಕ್ ಚಾರ್ಜ್‌ಸ್ ಕೊಡುತ್ತೇವೆ. ಅವರು ಆ ಕೆಲಸವನ್ನು ನೋಡಿಕೊಳ್ಳಬೇಕು ಇದರಲ್ಲಿ ಮಕ್ಕಳ ಪೋಷಕರ ಜವಾಬ್ದಾರಿನೂ ಇದೆ. ದುರುಪಯೋಗವಾಗುತ್ತಿದೆ ಎಂದು ಈ ಸದನದಲ್ಲಿ ತೆಗೆದುಕೊಂಡು ಬಂದು ಹೇಳಿದರೆ ಪ್ರಯೋಜನವಿಲ್ಲ. ಪೋಷಕರೇ ಅಲ್ಲಿ ಸರಿಯಾಗಿ ಉಪಾಧ್ಯಾಯರು ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎಂದು ನೋಡತಕ್ಕಂಥ ಸ್ವಲ್ಪ ಜವಾಬ್ದಾರಿಯನ್ನು ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.—ಹಳ್ಳಿಗಳಲ್ಲಿ ಡಿಪಾರ್ಟ್‌ಮೆಂಟಲ್ ಕಮಿಟಿಗಳನ್ನು ಮಾಡಿದ್ದೀರಿ. ಆ ಕಮಿಟಿಯವರೇ ಮಿಡ್ ಡೇ ಮಿಲ್ಸ್‌ನ್ನು ದುರುಪಯೋಗ ಮಾಡಿಕೊಂಡು ಅವರೇ ಉಪಯೋಗಿಸುತ್ತಾ ಇರುವುದನ್ನು ಸರ್ಕಾರದವರ ನಜರಿಗೆ ಬಂದಿದೆಯೇ? ಇದರ ಬಗ್ಗೆ ಪೊಲೀಸ್ ಕೇಸುಗಳು ಏನು ಇಂಡಗಿ ತಾಲ್ಲೂಕಿನಲ್ಲಿ ಆಗಿರುವುದು ಗಮನಕ್ಕೆ ಬಂದಿದೆಯೇ?

ಶ್ರೀಮತಿ ಇ. ಇ. ವಾಜ್.—ಬೇಳಲಯೇ ಎದ್ದು ಹೊಲವನ್ನು ಮೇಯುತ್ತಿರುವಾಗ ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ಇದು ಡಿಪಾರ್ಟ್‌ಮೆಂಟ್‌ನವರ ಕೆಲಸ ಅವರು ಇದನ್ನು ನೋಡಿಕೊಳ್ಳಬೇಕು, ಇದರ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ ಉತ್ತರ ಕೊಟ್ಟಿದ್ದೇನೆ, ಹಾಗೆಯೇ ಮಾನ್ಯ ಸದಸ್ಯರು ಜವಾಬ್ದಾರಿಯನ್ನು ವಹಿಸಬೇಕು.

Sri M. M. SAJJAN.—May I know whether Government is aware that the malpractices or misuse of such mid-day meals, amount to offences under the Indian Penal Code? As such, I wish to know whether cases have been lodged against the offenders.

Smt.. E. E. VAZ.—Departmental action is taken. Sometimes their increments are stopped. Whatever disciplinary action is possible is taken and will be taken.

CONSTRUCTION OF RURAL ROADS IN SAGAR TALUK

163. Sri KAGODU THIMMAPPA (Sagar).—

Will the Minister for Public Works and Electricity be pleased to state:—

(*a*) whether it has come to the notice of the Government that the rural roads taken up during the year 1972-73 in Sagar taluk have not been completed so far;

(*b*) whether it is a fact that the Government was asked to construct necessary drains and bridges in order to make the above rural roads usable;

(*c*) if so, the action taken by the Government in this regard?

Sri H. M. CHANNABASAPPA (Minister for Public Works and Electricity) .—

(a) Yes.

(*b*) Yes.

(*c*) It will be decided subject to availability of funds.

ಶ್ರೀ ಕಾಗೋಡು ತಿಮ್ಮಪ್ಪ.–ಸ್ಯಾಮಿ (ಬಿ) ಪ್ರಶ್ನೆಗೆ ನಿಜ ಎಂದು ಹೇಳಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ; ಹಳ್ಳಿಗಳಲ್ಲಿ ತೆಗೆದುಕೊಂಡಿರತಕ್ಕ ರಸ್ತೆ, ಮೋರಿ ಮಾಡಬೇಕಾದರೆ ಎಷ್ಟು ಹಣ ಬೇಕೆಂದು ಅಂದಾಜು ಮಾಡಿದ್ದೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರಿ ಆಜ್ಞೆಯಲ್ಲಿ ಉಲ್ಲೇಖವಾಗಿದೆ. ಯಾವಯಾವ ರಸ್ತೆಯಲ್ಲಿ ಎಷ್ಟೆಷ್ಟು ಲ್ಯಾಂಡ್ ಏರಿಯಾ, ವಾಟರ್ ವೇ ಇದೆ ಎಂದು ನೋಡಬೇಕು. ವಾಟರ್ ಇದ್ದರೆ ರೂರಲ್ ಕನೆಕ್ಟನ್ ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿ ಗೌವರ್ನಮೆಂಟ್ ಆರ್ಡರ್ ನಲ್ಲಿ ಉಲ್ಲೇಖವಾಗಿದೆ ಅದುದರಿಂದ ಇದಕ್ಕೆ ಪ್ರತ್ಯೇಕವಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಎರಡನೆಯದು ತಾವು ಕೇಳುವುದು ಇಡೀ ರಾಜ್ಯದಲ್ಲಿ ಇರತಕ್ಕ ಎಲ್ಲಾ ಹಳ್ಳಿಗಳು. ಅದರೆ ನಾವು ರಾಜ್ಯ ಮಟ್ಟದಲ್ಲಿ ತಾಲ್ಲೂಕ್ ಮಟ್ಟದಲ್ಲಿ ಅಂದಾಜು ಮಾಡುವಾಗ ಸಿ. ಡಿ. ವರ್ಕ್ಸ್ ಏನು ಇದೆ. ಅದನ್ನು ನೋಡಿ ತೆಗೆದುಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ 1972–73ರಲ್ಲಿ ತೆಗೆದುಕೊಂಡ ರಸ್ತೆಗಳು ಅಪೂರ್ಣವಾಗಿದೆ ಎಂದು ಒಪ್ಪಿಕೊಂಡಿದ್ದೀರಿ ಆ ದೃಷ್ಟಿಯಿಂದ ಅವುಗಳನ್ನು ಉಪಯೋಗಕ್ಕೆ ತರುವ ರೀತಿಯಲ್ಲಿ ಪ್ರತ್ಯೇಕವಾದ ಕ್ರಮದಿಂದ ಕ್ಯೆಗೊಳ್ಳುವುದಕ್ಕೆ ತಾವು ಏನು ಆಲೋ ಮಾಡಿದ್ದೀರಿ ?

ಶ್ರೀ ಎಚ್. ಎಂ ಚನ್ನಬಸಪ್ಪ.—ಗವರ್ನಮೆಂಟ್ ಆರ್ಡರ್‌ನಲ್ಲಿ ಎಲ್ಲಾ ಉಲ್ಲೇಖ ಮಾಡಿದ್ದಾರೆ. ಎಷ್ಟು ದಿವಸಗಳಲ್ಲಿ ಆ ರಸ್ತೆಗಳನ್ನು ಪೂರೈಕೆ ಮಾಡತಕ್ಕದ್ದು ಎಂಥ ಸಿ ಡಿ. ವರ್ಕ್ಸ್ ಮಾಡತಕ್ಕಂಥದ್ದು ಎಂದು ಉಲ್ಲೇಖವಾಗಿದೆ. ಎಷ್ಟು ದಿವಸಗಳಲ್ಲಿ ಮಾಡಬೇಕೋ ಅಷ್ಟು ಸಾಧ್ಯವಾದಷ್ಟು ಪ್ರಯತ್ನ ಮಾಡಿ, ಅಷ್ಟೇ ಕಾಲದೊಳಗೆ ಅದನ್ನು ಮುಗಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಣದ ಪರಿಸ್ಥಿತಿ ಆಧಾರದ ಮೇಲೆ ನಿರ್ಧರಿಸುವುದಾಗಿ ಹೇಳಿದ್ದೀರಿ. ಹಿಂದಿನ ಈ ವರ್ಷ ಹಣದ ಕೊರತೆಯಿಂದ ಆಗಲಿಲ್ಲವೆಂದು ತಿಳಿಸಿದ್ದೀರಿ, ಆದ್ದರಿಂದ 1974—75 ನೇ ಸಾಲಿನಲ್ಲಿ ಆಗಬಹುದೆಂದು ನಿರೀಕ್ಷಿಸಬಹುದೇ ? ಹಾಗಿದ್ದ ಪಕ್ಷದಲ್ಲಿ ಮುಂದಿನ 1974—75 ನೇ ಸಾಲಿನಲ್ಲಿ ಕೆಲಸಗಳು ಪೂರ್ಣವಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಜ್ಞೆಯಲ್ಲಿ ಎಷ್ಟು ಕಾಲವನ್ನು ನಿಗದಿ ಮಾಡಿದ್ದೇವೆ ಅಷ್ಟು ದಿವಸದೊಳಗೆ ಕೆಲಸಗಳನ್ನು ಪೂರೈಸುತ್ತೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಆಜ್ಞೆಯೋಳಗೆ ಎಷ್ಟು ಆಗಬೇಕೋ ಅಷ್ಟನ್ನು ಮಾಡುತ್ತೇವೆಂದು ಹೇಳಿದ್ದರೂ ಕೂಡ ರೋಡ್ ಮಾಡುವಾಗ ಮೋರಿಗಳನ್ನು ಕಟ್ಟದೇ ಹೋದರೆ ಹಣ ಖರ್ಚು ಮಾಡಿರುವುದು ಪ್ರಯೋಜನಕ್ಕೆ ಬರುವುದಿಲ್ಲ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸರ್ವವೇದ್ಯವಾದುದು ಅದಕ್ಕೆ ಉತ್ತರವೇ ಅನಾವಶ್ಯಕ.

ಶ್ರೀ ಸಿ. ಬೈರೇಗೌಡ.—ತಾವು ಹೊರಡಿಸಿರತಕ್ಕ ಸರ್ಕಾರಿ ಆಜ್ಞೆಯಲ್ಲಿ ಒಂದು ಕಿಲೋ ಮೀಟರ್‌ಗೆ 7500 ರೂಪಾಯಿ ಎಂದು ತಿಳಿಸಿದ್ದೀರಿ ಕೆಲವು ಸಂದರ್ಭಗಳಲ್ಲಿ 13 ಸಾವಿರ ರೂಪಾಯಿ ಎಂದು ತಿಳಿಸಿದ್ದೀರಿ. ಕೆಲವು ಕಡೆ ಹಣ ಸಾಕಾಗುವುದಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಆ ರೀತಿ ಬಂದಿದ್ದರೆ ಹೆಚ್ಚಿಗೆ ಹಣವನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದವರ ಗಮನಕ್ಕೆ ಬಂದಿದೆ. ಅಂಥ ವಿಶೇಷ ಸಂದರ್ಭದಲ್ಲಿ ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ನಾವು ನಿಗದಿ ಮಾಡಿದ ಫಿನಾನ್ಸಿಯರ್ ನಾರಂಸ್ ಸಾಲದೇ ಇದ್ದ ಪಕ್ಷದಲ್ಲಿ ವಿಶೇಷ ಪರಿಸ್ಥಿತಿ ಇದ್ದರೆ ಒದಗಿಸಿಕೊಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಗ್ರಾಮಾಂತರ ಪ್ರದೇಶಗಳ ರಸ್ತೆಗಳು ಮತ್ತು ಮೋರಿಗಳನ್ನು ಮಾಡಿಸುವುದಕ್ಕೆ ಹಣದ ಪರಿಸ್ಥಿತಿ ಸರಿಯಿಲ್ಲ ಎಂದು ಹೇಳುತ್ತೀರಿ ಬೆಂಗಳೂರು ಮತ್ತು ಮೈಸೂರಿನಲ್ಲಿ ಹಣದ ಪರಿಸ್ಥಿತಿ ಸರಿಯಾಗಿದೆಯೇ ? ಅಲ್ಲಿ ಬಹಳಷ್ಟು ಕೆಲಸ ಕಾರ್ಯಗಳು ನಡೆಯುತ್ತಿವೆ, ಹಳ್ಳಿಗಳಲ್ಲಿ ನಡೆಯುವುದಿಲ್ಲ ಇದಕ್ಕೆ ಕಾರಣವೇನು ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಸರ್ಕಾರದ ಅಕಾನಮಿ ಪಟ್ಟಣಗಳಿಗೂ, ಹಳ್ಳಿಗಳಿಗೂ ಒಂದೇ ಆಗಿರುತ್ತದೆ ಅದರಿಂದ ನಾವು ಏನು ಊಹ ಮಾಡಿದ್ದೀರಿ ಅದು ಸರಿಯಲ್ಲ, ಆದರೂ ನಾವು ಹಳ್ಳಿಗಳಿಗೆ ಗ್ರಾಮಾಂತರ ಪ್ರದೇಶಗಳಿಗೆ ಪ್ರಾಧಾನ್ಯತೆ ಕೊಡುವುದೇ ಸರ್ಕಾರದ ಉದ್ದೇಶ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ಮಲೆನಾಡು ಮತ್ತು ಗುಡ್ಡಗಾಡು ಪ್ರದೇಶದಲ್ಲಿರ ತಕ್ಕ ರಸ್ತೆಗಳಿಗೆ ತಾವು ಗೊತ್ತು ಪಡಿಸಿರತಕ್ಕಂಥ ಹಣದಿಂದ ಪೂರ್ಣಗೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ದೃಷ್ಟಿಯಿಂದ ಆ ಭಾಗಕ್ಕೆ ವಿಶೇಷ ರೀತಿಯ ಅನಕ್ಕೆ ವಹಿಸಿ ಕೆಲಸಗಳನ್ನು ಪೂರ್ಣಗೊಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಸರ್ಕಾರದವರ ಗಮನಕ್ಕೆ ಬಂದಿದೆ, ನಾನು ಅಗಲೇ ಹೇಳಿದೆ, ಎಲ್ಲೆಲ್ಲ ವಿಶೇಷ ಕಾರಣಗಳಿಗೋಸ್ಕರ ಹೆಚ್ಚು ಹಣ ಒದಗಿಸಬೇಕಾಗುತ್ತದೆ ಅಂಥಲ್ಲಿ ಪೂರೈಕೆ ಮಾಡಿ ಅದನ್ನು ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆ.

COMPENSATION FOR LANDS ACQUIRED TO CONSTRUCT HORTI TANK

182. Sri J. L. KABADE (Ballolli) .—

Will the Minister of State for Minor Irrigation be pleased to state :—

(*a*) whether lands were acquired by the Revenue Department and Public Works Department to construct the Horti tank ;

(*b*) when this Horti Minor Irrigation tank was constructed ;

(*c*) the difficulties experienced to pay crop compensation to the land owners by the Government ;

(*d*) whether it is not a fact that the persons whose lands have been taken by the Government have become landless people at Horti (Names and the extent of land taken over by the Government may be furnished) ;

(*e*) if so, the arrangements made by the Government to give land to these people ;